**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 702/2017
ಸಿಡಬ್ಲೂ-8
ಪಿ.ಡಬ್ಲ್ಯೂ-6

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಯಲ್ಲವ್ವ ಉರ್ಪ ಶಂಕ್ರವ್ವ ಹರಿಜನ |
| ಗಂಡನ ಹೆಸರು ಃ | | ಭೀಮಪ್ಪ |
| ವಯಸ್ಸು | ಃ | 45 ವರ್ಷ, |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ಗುಂಡಕನಾಳ |

(ದಿಃ07/08/2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಮೃತ ಭೀಮಪ್ಪ ಇವರು ನನಗೆ ತಂದೆಯಾಗಬೇಕು. ಸುಮಾರು 7-8 ವರ್ಷಗಳ ಹಿಂದೆ ನನ್ನ ತಂದೆ ಸೈದಾಪೂರ ಮುತ್ಯಾನ ಜಾತ್ರೆಗೆ ಬಂದಿದ್ದರು. ಆಗ ದೇವರಿಗೆ ಕಾಯಿ ಒಡೆಯಲೆಂದು ಹೋಗಿ ಬರುವಾಗ ನನ್ನ ತಂದೆ ವಾಹನ ಅಪಘಾತದಲ್ಲಿ ತೀರಿಹೋಗಿರುತ್ತಾರೆ. ನನ್ನ ತಂದೆಗೆ ವಾಹನವು ರಿವರ್ಸ ನಡೆಸಿಕೊಂಡು ಹೋಗಿ ಡಿಕ್ಕಿ ಹೊಡಿಸಿ ನನ್ನ ತಂದೆಯ ಶರೀರದ ಮೇಲೆ ಹಾಯ್ದು ಹೋಗಿದ್ದು, ನನ್ನ ತಂದೆಯ ತೊಡೆಗೆ, ಎರಡೂ ಕೈಗಳಿಗೆ ಪೆಟ್ಟು ಮತ್ತು ನನ್ನ ತಂದೆಯ ಎದೆಯ ಮೇಲೆ ಭಾರಿ ಪ್ರಮಾಣದ ಗಾಯಗಳಾಗಿದ್ದವು ಎಂದು ನಮ್ಮ ಊರಿನ ಗ್ರಾಮಸ್ಥರು ಬಂದು ನನಗೆ ತಿಳಿಸಿರುತ್ತಾರೆ. ನಂತರ ನಾನು ಹೋಗಿ ನನ್ನ ತಂದೆಗೆ ನೀರು ಕುಡಿಸುವಾಗ ಅವರು ತೀರಿಹೋಗಿರುತ್ತಾರೆ. ನನ್ನ ತಂದೆಗೆ ರಂಜಾನಸಾಬ ಮಕಾನದಾರ ಎನ್ನುವವರು ವಾಹನ ಹಾಯಿಸಿ ಅಪಘಾತಪಡಿಸಿರುತ್ತಾರೆ. ಸದರಿ ದಿನ ನನ್ನ ತಂದೆಗೆ ಅಪಘಾತಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಹಾಜರ ಇರುತ್ತಾರೆ. ಸದರಿ ಅಪಘಾತ ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಘಟನೆ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪೋಲಿಸರು ನನ್ನನ್ನು ಠಾಣೆಗೆ ಎರಡು ಬಾರಿ ಕರೆಸಿದ್ದು, ನಾನು ಘಟನೆ ಕುರಿತು ಪೋಲಿಸರಿಗೆ ಎಲ್ಲ ವಿಷಯವನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

**ಪಾಟಿ ಸವಾಲುಃ  ಆರೋಪಿ ಪರವಾಗಿ ಶ್ರೀ ಆರ್ ವಾಯ್ ಎನ್ ವಕೀಲರಿಂದ**

ನಾನು ಖಾಯಂ ತರೀಖ ಗುಂಡಕನಾಳ ಗ್ರಾಮದಲ್ಲಿ ವಾಸ ಮಾಡುತ್ತೇನೆ. ಘಟನೆ ನಡೆದಾಗ ನಾನು ಗುಂಡಕನಾಳ ಗ್ರಾಮದಲ್ಲಿ ಇದ್ದೆ.  ಘಟನೆಯ ಕುರಿತು ನನಗೆ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಘಟನೆಯ ಕುರಿತು ನನಗೆ ನನ್ನ ತಂಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.  ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿದ ಅಂಶಗಳನ್ನು ನ್ಯಾಯಾಲಯದ ಮುಂದೆ ಹೇಳಲು ಪೋಲಿಸರು ಹೇಳಿಕೊಟ್ಟಿರುತ್ತಾರಾ ಅಥವಾ ನಿನ್ನ ಅಣ್ಣತಮ್ಮಂದಿರು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ನನ್ನ ವಯಕ್ತಿಕ ಮಾಹಿತಿ ಮೇರೆಗೆ ನಾನು ಸಾಕ್ಷಿ ಹೇಳಿದ್ದೇನೆಂದು ನುಡಿಯುತ್ತಾರೆ.

ಘಟನೆಯ ಕುರಿತು ನಾನು ಪೋಲಿಸರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಾನು ಘಟನೆಯ ಕುರಿತು ಪೋಲಿಸರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಸದರಿ ಮಾಹಿತಿಯನ್ನು ಸುಮಾರು 6 ವರ್ಷಗಳ ಹಿಂದೆ ಪೋಲಿಸರು ನನ್ನ ಮನೆಗೆ ಬಂದಾಗ ಕೊಟ್ಟಿರುತ್ತೇನೆ. ಮಾಹಿತಿಯನ್ನು ಸುಮಾರು 6 ವರ್ಷಗಳ ಹಿಂದೆ ಪೋಲಿಸರು ನನ್ನ ಮನೆಗೆ ಬಂದಾಗ ಕೊಟ್ಟಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಪರಿಹಾರಧನ ಪಡೆಯುವಗೋಸ್ಕರ,  ಆರೋಪಿತನಿಗೂ ಮತ್ತು ಅಪಘಾತಕ್ಕೂ ಯಾವುದೇ ಸಂಬಂಧ ಇರದಿದ್ದರೂ ಸಹಿತ ಆರೋಪಿತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಆರೋಪಿತನು ನಮ್ಮ ಗ್ರಾಮದವನಾದ ಕಾರಣ ಅವನ ಹೆಸರು ರಂಜಾನಸಾಬ ಮಕಾನದಾರ ಎಂದು ನನಗೆ ಗೊತ್ತಿರುತ್ತದೆ.

ಆರೋಪಿತನು ಕೊಡಗಾನೂರ ಗ್ರಾಮದವನಾಗಿರುತ್ತಾನೆ ಎಂದರೆ ಸರಿ. ಆರೋಪಿತನು ಕೊಡಗಾನೂರ ಗ್ರಾಮದವನಾಗಿರುತ್ತಾನೆ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹಿತ ಅವನು ನಮ್ಮ ಗ್ರಾಮದವನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದೂರನ್ನು ನನ್ನ ತಮ್ಮನಾದ ಚಾಸಾ 1 ರವರು ದಾಖಲಿಸಿರುತ್ತಾರೆ. ದೂರನ್ನು ನನ್ನ ತಮ್ಮನೇ ಬರೆದಿರುತ್ತಾನೆ.  ಚಾಸಾ 1 ರವರಿಗೂ ಸಹ ಘಟನೆಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿರದಿದ್ದರೂ ಸಹಿತ ಪರಿಹಾರಧನ ಪಡೆಯುವಗೋಸ್ಕರ ನನ್ನ

ತಮ್ಮ ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಮ್ಮ ದೂರನ್ನು ದಾಖಲಿಸಿದ ಕಾರಣ ಆತನು ಹೇಳಿಕೊಟ್ಟಂತೆ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದರೂ ಸಹಿತ ಈ ಮೊದಲು ಆರೋಪಿತನನ್ನು ನೋಡಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಟಾಟಾ ಏಸ ವಾಹನ ಅಪಘಾತಪಡಿಸಿರುತ್ತದೆ. ಸದರಿ ವಾಹನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಆರೋಪಿತನೇ ವಾಹನ ಡಿಕ್ಕಿ ಪಡಿಸಿ ಅಪಘಾತಪಡಿಸಿರುತ್ತಾನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಯಾವುದೇ ವಯಕ್ತಿಕ ಮಾಹಿತಿ ಇರದಿದ್ದರೂ ಸಹಿತ ಚಾಸಾ 1 ನನ್ನ ತಮ್ಮನಾದ ಕಾರಣ ಅವನು ಕೊಟ್ಟ ದೂರಿಗೆ ಅನುಕೂಲ ಆಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಆರೋಪಿತನ ಯಾವುದೇ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.